**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ. ಭಾರತಿ ಶೆಟ್ಟಿ ಇವರ ಶೂನ್ಯ ವೇಳೆಯ ಪ್ರಸ್ತಾವನೆಗೆ ಉತ್ತರ ಒದಗಿಸುವ ಕುರಿತು.**

**ಪ್ರಶ್ನೆ:**

ದಿನಾಂಕ: 02-02-2024 ರಂದು ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ವರದಿಯಾಗಿರುವಂತೆ ರೈಲಿನಲ್ಲಿ ಮಹಿಳಾ ಪ್ರಯಾಣಿಕರೊಬ್ಬರನ್ನು ಹತ್ಯೆ ಮಾಡಿ ಚಿನ್ನಾಭರಣ ದೋಚಿರುವ ಘಟನೆ ರಾತ್ರಿ ಶಿವಮೊಗ್ಗೆ – ಬೆಂಗಳೂರು ರೈಲಿನಲ್ಲಿ ನಡೆದಿದೆ.

ಶಿವಮೊಗ್ಗ ದಿಂದ ಬೆಂಗಳೂರಿಗೆ ಮಂಗಳವಾರ ರಾತ್ರಿ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದ, ಬೆಂಗಳೂರಿನ ಮಲ್ಲೇಶ್ವರಂ ಅರಣ್ಯ ಇಲಾಖೆ ವಸತಿ ಸಮುಚ್ಚಯದ ನಿವಾಸಿ ಜಿ.ಅನ್ನಪೂರ್ಣ(50 ವರ್ಷ) ಇವರು ಹತ್ಯೆ ಗೀಡಾದವರು. ದರೋಡೆಕೋರರು ಶವವನ್ನು ತುಮಕೂರು ಸಮೀಪದ ಹಿರೇಹಳ್ಳಿ ಬಳಿ ಎಸೆದಿದ್ದಾರೆ. ಸ್ವಿಚ್ ಆಫ್ ಆಗಿದ್ದ ಮಹಿಳೆಯ ಮೊಬೈಲ್ ಮತ್ತು ಬಟ್ಟೆ ಬ್ಯಾಗ್‌ಗಳು ಶವ ದೊರೆತ ಸ್ಥಳದಿಂದ ಸುಮಾರು 20 ಕಿ.ಮೀ. ದೂರದಲ್ಲಿ ಪತ್ತೆಯಾಗಿದೆ.

ಮೂಲತ: ಭದ್ರಾವತಿ ತಾಲ್ಲೂಕು ಬಿ.ಆರ್‌ಪಿಯವರಾದ ಅನ್ನಪೂರ್ಣ ಬೆಂಗಳೂರಿನ ಅರಣ್ಯ ಭವನದಲ್ಲಿ ಸ್ಟೆನೋಗ್ರಾಫರ್ ಆಗಿದ್ದರು. ಅವರನ್ನು ಶಿವಮೊಗ್ಗದಲ್ಲಿ ಇಲಾಖೆಯ ಸ್ಟೆನೋ ಗ್ರಾಫರ್ ಪರೀಕ್ಷೆಗೆ ಮೇಲ್ವಿಚಾಕರಾಗಿ ಕಳುಹಿಸಲಾಗಿತ್ತು. ಕರ್ತವ್ಯ ಮುಗಿಸಿಕೊಂಡು ಅವರು ಮಂಗಳವಾರ ರಾತ್ರಿ ಬೆಂಗಳೂರಿಗೆ ಹೊರಟಿದ್ದರು, ಕುವೆಂಪು ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುವ ಅವರ ಸಹೋದರ ಬ್ರಹ್ಮಾನಂದ ರಾನಡೆ ಸಹ ಜೊತೆಗಿದ್ದರು. ನಿರಂತರ ರಜೆ ಇದ್ದ ಕಾರಣ ಸ್ಲೀಪಿಂಗ್ ಕೋಚ್ ನಲ್ಲಿ ಬುಕಿಂಗ್ ಸಿಕ್ಕಿರಲಿಲ್ಲ. ಹಾಗಾಗಿ ಅವರಿಬ್ಬರು ಸಾಮಾನ್ಯ ದರ್ಜೆಯ ಬೋಗಿಯಲ್ಲಿ ಹೊರಟ್ಟಿದ್ದರು. ಆದರೆ ಪ್ರಯಾಣಿಕರ ಸಂಖ್ಯೆ ಜಾಸ್ತಿ ಆಗಿ ಕೂರಲು ಸಹ ಜಾಗ ಇರಲಿಲ್ಲ. ಆದ್ದರಿಂದ ಮಹಿಳಾ ಬೋಗಿ ಸಂಪೂರ್ಣ ಖಾಲಿ ಆಗಿರುವುದರಿಂದ ಅವರು ಒಬ್ಬರೇ ಆದರೂ ಪರವಾಗಿಲ್ಲವೆಂದು ಸಹೋದರನನ್ನ ಒಪ್ಪಿಸಿ ಮಹಿಳಾ ಬೋಗಿಗೆ ಹೋಗಿ ಮಲಗಿದ್ದರು. ಯಶವಂತಪುರದಲ್ಲಿ ಬೆಳಗ್ಗೆ ರೈಲು ಇಳಿದು ಸಹೋದರಿಗೆ ಕರೆಮಾಡಿದಾಗ ಮೊಬೈಲ್ ಸ್ವಿಚ್ ಆಫ್ ಆಗಿತ್ತು, ಬೋಗಿಯಲ್ಲಿ ಇರಲಿಲ್ಲ. ಮನೆಗೆ ಹೋಗಿರಬಹುದ ಎಂಬ ವಿಶ್ವಾಸದಲ್ಲಿ ತಮ್ಮ ಉದ್ದೇಶಿತ ಕೆಲಸದೆಡೆಗೆ ತೆರಳಿದ್ದರು. ಆದರೆ 8.00 ಗಂಟೆಯಾದರೂ ಅನ್ನಪೂರ್ಣ ಮನೆ ತಲುಪಿರಲಿಲ್ಲ. ಮತ್ತೆ ಯಶವಂತಪುರ ರೈಲು ನಿಲ್ದಾಣಕ್ಕೆ ಬಂದಿದ್ದಾಗ ತುಮಕೂರು ಹಿರೇಹಳ್ಳಿ ಬಳಿ ಮಹಿಳೆಯ ಶವಪತ್ತೆಯಾಗಿರುವ ಸಂದೇಶ ರೈಲ್ವೇ ಪೊಲೀಸ್ ಠಾಣೆಗೆ ಬಂದಿತ್ತು. ಪೋಟೋವನ್ನು ಕುಟುಂಬದವರಿಗೆ ತೋರಿಸಿದಾಗ ಅದು ಅನ್ನಪೂರ್ಣ ಎನ್ನುವುದು ಖಾತ್ರಿಯಾಗಿತ್ತು. ಈ ಸಂಬಂಧವಾಗಿ ನಾನೇ ಖುದ್ದಾಗಿ ಅರಣ್ಯ ಇಲಾಖೆ ಮತ್ತು ರೈಲ್ವೇ ಪೊಲೀಸ್ ಇಲಾಖೆಗಳಿಗೆ ಭೇಟಿ ಮಾಡಿದರೂ ಪ್ರಕರಣದ ಬಗ್ಗೆ ಸಂಬಂಧಪಟ್ಟವರಿಂದ ನಿಖರವಾದ ಮಾಹಿತಿ ದೊರೆತಿರುವುದಿಲ್ಲ.

ಇಂತಹ ಪ್ರಕರಣಗಳಲ್ಲಿ ಮಹಿಳೆಯರ ರಕ್ಷಣೆ ಮತ್ತು ಸುರಕ್ಷತೆಯ ಬಗ್ಗೆ ತೀವ್ರ ನಿರ್ಲಕ್ಷ್ಯತೆ ತೋರಿಸುತ್ತಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಆದ್ದರಿಂದ ಈ ಪ್ರಕರಣ ಕುರಿತು ಕೂಲಂಕುಷವಾಗಿ ಸೂಕ್ತ ತನಿಖೆ ನಡೆಸಿ ಹಾಗೂ ಈ ರೀತಿಯ ಪ್ರಕರಣಗಳು ಮರುಕಳಿಸದಂತೆ ಕ್ರಮ ಕೈಗೊಳ್ಳುವ ಕುರಿತು.

**ಉತ್ತರ:**

ಈ ಪ್ರಕರಣದಲ್ಲಿನ ಮೃತೆ ಶ್ರೀಮತಿ.ಜಿ.ಅನ್ನಪೂರ್ಣ (ವಯಸ್ಸು 50 ವರ್ಷ) ಆದ ಈಕೆಯು ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಅರಣ್ಯಭವನದಲ್ಲಿ ಸ್ಟೆನೋಗ್ರಾಫರ್ ಆಗಿ ಕೆಲಸ ಮಾಡಿಕೊಂಡಿದ್ದು, ದಿನಾಂಕ:30.01.2024 ರಂದು ಶಿವಮೊಗ್ಗದಲ್ಲಿ ಸ್ಟೆನೋಗ್ರಾಫರ್ ಶಾರ್ಟ ಆಂಡ್ ಪರೀಕ್ಷೆಯ ಕೊಠಡಿಯ ಮೇಲ್ವಿಚಾರಕರಾಗಿ ಕರ್ತವ್ಯಕ್ಕೆ ನಿಯೋಜನೆಯಾಗಿದ್ದರಿಂದ, ದಿನಾಂಕ:27.01.2024 ರಂದು ಬೆಂಗಳೂರಿನಿಂದ ಶಿವಮೊಗ್ಗಕ್ಕೆ ಬಸ್‌ನಲ್ಲಿ ಪ್ರಯಾಣಿಸಿ, ಶಿವಮೊಗ್ಗದಲ್ಲೆ ಇರುವ ತನ್ನ ಅಣ್ಣನಾದ ಬ್ರಹ್ಮಾನಂದ ರಾನಡೆ ರವರ ಮನೆಯಲ್ಲಿ ಉಳಿದುಕೊಂಡು, ದಿನಾಂಕ:30.01.2024 ರಂದು ಪರೀಕ್ಷೆಯ ಮೇಲ್ವಿಚಾರಕ ಕರ್ತವ್ಯ ಹಾಜರಾಗಿ, ಕರ್ತವ್ಯ ಮುಗಿಸಿಕೊಂಡು ಮತ್ತೆ ಅಣ್ಣನ ಮನೆಗೆ ಹೋಗಿ ಇರುವಾಗ ತನ್ನ ಅಣ್ಣನೂ ಸಹ ಬೆಂಗಳೂರಿನಲ್ಲಿ ತನ್ನ ಪರಿಚಯಸ್ಥರ ವೈಕುಂಟ

ಸಮಾರಾಧನೆಗೆ ಹಾಜರಾಗುವ ಸಲುವಾಗಿ ಅಂದೇ ಬೆಂಗಳೂರಿಗೆ ರೈಲುಗಾಡಿಯಲ್ಲಿ ಹೊರಡುವ ಬಗ್ಗೆ ತಿಳಿಸಿದ್ದರಿಂದ, ಮೃತಳು ಬೆಂಗಳೂರಿಗೆ ಬರುವ ಸಲುವಾಗಿ ತನ್ನ ಅಣ್ಣನಾದ ಬ್ರಹ್ಮಾನಂದ ರಾನಡೆ ರವರೊಂದಿಗೆ ಮನೆಯಿಂದ ಅಂದೇ ರಾತ್ರಿ 11-15 ಗಂಟೆಗೆ ಶಿವಮೊಗ್ಗ ರೈಲು ನಿಲ್ದಾಣಕ್ಕೆ ಬಂದು ರೈಲುಗಾಡಿ ಸಂ.16582 ಎಕ್ಸ್‌ಪ್ರೆಸ್ ರೈಲುಗಾಡಿಯಲ್ಲಿ ಪ್ರಯಾಣಿಸುವ ಸಲುವಾಗಿ ಜನರಲ್ ಟಿಕೇಟ್ ಅನ್ನು ತೆಗೆದುಕೊಂಡಾಗ್ಗೆ, ಮೃತಳ ಅಣ್ಣ ಆ ಸಮಯದಲ್ಲಿ ಮೃತಳನ್ನು ಬ್ಯಾಗ್‌ಗಳ ಸಮೇತ ಸದರಿ ರೈಲುಗಾಡಿಯ ಮಹಿಳಾ ಬೋಗಿಗೆ ಮೃತಳನ್ನು ಹತ್ತಿಸಿ ಕೂರಿಸಿ, ನಂತರ ತನಗೆ ರಿಷರ್ವೇಷನ್ ಆಗಿದ್ದ ಬೋಗಿ ಎಸ್-1 ಕೋಚ್ ಸೀಟ್ ನಂ.17 ರಲ್ಲಿ ಕುಳಿತು ಮೃತಳ ಮೊಬೈಲ್‌ಗೆ ಪೋನ್ ಮಾಡಿ ಆರಾಮಾಗಿ ಕುಳಿತಿದ್ದೆಯೇ ಎಂಬ ಬಗ್ಗೆ ವಿಚಾರಿಸಿ, ಸದರಿ ರೈಲುಗಾಡಿಯಲ್ಲಿ ಪ್ರಯಾಣ ಮಾಡಿಕೊಂಡು ಯಶವಂತಪುರ ರೈಲುನಿಲ್ದಾಣಕ್ಕೆ ದಿನಾಂಕ:31-01-2024 ರಂದು ಬೆಳಗ್ಗೆ ಬಂದು ಇಳಿದ ನಂತರ, ಬ್ರಹ್ಮನಾಂದ ರಾನಡೆ ರವರು ಮೃತಳ ಮೊಬೈಲ್‌ಗೆ ಕರೆ ಮಾಡಲಾಗಿ, ರಿಸೀವ್ ಮಾಡದೇ ಇದ್ದುದ್ದರಿಂದ ತಾನು ರೈಲುಗಾಡಿಯ ಮಹಿಳಾ ಬೋಗಿಯ ಹತ್ತಿರ ಹೋಗಿ ನೋಡಿ ತನ್ನ ತಂಗಿ ಅನ್ನಪೂರ್ಣ ಮತ್ತು ಅವರ ಲಗೇಜ್ ಕಂಡು ಬಾರದೇ ಇದ್ದಿದ್ದರಿಂದ, ಮನೆಗೆ ಹೋಗಿರುತ್ತಾರೆಂದು ಭಾವಿಸಿ, ತಾನು ಕತ್ರಿಗುಪ್ಪೆಯಲ್ಲಿರುವ ತನ್ನ ಅಕ್ಕನ ಮನೆಗೆ ಹೋಗಿ ಮನೆಯಲ್ಲಿರುವಾಗ್ಗೆ, ಮೃತಳ ಮಗನಾದ ಪ್ರಣವ್.ಎಂ ಗೋಗಟೆಯು ಬೆಳಗ್ಗೆ 08-00 ಗಂಟೆಗೆ ಪೋನ್ ಮಾಡಿ ತನ್ನ ತಾಯಿ ಮನೆಗೆ ಬಾರದೇ ಇದ್ದ ಬಗ್ಗೆ ತಿಳಿಸಿದ್ದರಿಂದ ಎಲ್ಲರೂ ಕೂಡಿಕೊಂಡು ಯಶವಂತಪುರ ರೈಲ್ವೇ ಪೊಲೀಸ್ ಠಾಣೆಗೆ ಬಂದು ವಿಚಾರ ಮಾಡಿದಾಗ ಪೊಲೀಸರು ಒಬ್ಬ ಮಹಿಳೆ ಹಿರೇಹಳ್ಳಿ ರೈಲುನಿಲ್ದಾಣದ ಹತ್ತಿರ ಮೃತಪಟ್ಟಿರುವುದಾಗಿ ತಿಳಿಸಿದ್ದರಿಂದ ಮೃತಳ ಮಗನು ಸದರಿ ಫೋಟೋವನ್ನು ನೋಡಿ ಗುರುತಿಸಿ, ತಮ್ಮ ತಾಯಿಯ ಸಾವಿನ ಬಗ್ಗೆ ಸೂಕ್ತ ತನಿಖೆ ಮಾಡಬೇಕೆಂದು ನೀಡಿದ ಹೇಳಿಕೆ ಮೇರೆಗೆ ಬೆಂಗಳೂರು ಗ್ರಾಮಾಂತರ ರೈ.ಪೊ.ಠಾಣೆ ಯು.ಡಿ.ಆರ್ ನಂ.20/2024 ಕಲಂ.174(ಸಿ) ಸಿ.ಆರ್.ಪಿ.ಸಿ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿರುತ್ತದೆ.

ಘಟನೆ ನಡೆದ ದಿನದಂದು ಕೂಡಲೇ ಎಸ್.ಓ.ಸಿ.ಓ, ಎಫ್.ಎಸ್.ಎಲ್ ತಜ್ಞರು ಮತ್ತು ಶ್ವಾನದಳವನ್ನು ಘಟನಾ ಸ್ಥಳಕ್ಕೆ ಕರೆಸಿ ಪರಿಶೀಲನೆ ಮಾಡಿಸಿ ತನಿಖೆ ಕೈಕೊಳ್ಳಲಾಗಿರುತ್ತದೆ. ಮೃತ ಮಹಿಳೆಯ ಪೋನ್ ಚಾಲ್ತಿಯಲ್ಲಿದ್ದು, ಸಿ.ಡಿ.ಆರ್ ಲೋಕೇಷನ್ ಸಹ ಪಡೆದು ಸದರಿ ಸ್ಥಳವನ್ನು ಪರಿಶೀಲಿಸಲಾಗಿ ಆ ಸ್ಥಳವು ಘಟನಾ ಸ್ಥಳದಿಂದ 20 ಕಿ.ಮೀ ದೂರವಿದ್ದು, ಅಲ್ಲಿ ಮೃತಳ ವ್ಯಾನಿಟಿ ಬ್ಯಾಗ್ ದೊರೆತಿದ್ದು, ಅದನ್ನು ಪರಿಶೀಲಿಸಲಾಗಿ ಅದರಲ್ಲಿ ಮೃತಳು ಬಳಸುತ್ತಿದ್ದ ಒಂದು ಮೊಬೈಲ್, ಎ.ಟಿ.ಎಂ ಕಾರ್ಡ, ಕ್ರೆಡಿಟ್ ಕಾರ್ಡ ಮತ್ತು ಐ.ಡಿ ಕಾರ್ಡ ದೊರೆತಿರುತ್ತದೆ. ಇವುಗಳನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತದೆ. ಆದರೆ ಉಳಿದ ಎರಡು ಲಗೇಜ್ ಬ್ಯಾಗ್‌ಗಳು ಪತ್ತೆಯಾಗಿರುವುದಿಲ್ಲ. ಸದರಿ ಬ್ಯಾಗ್‌ಗಳ ಪತ್ತೆಗಾಗಿ ಕ್ರಮ ಕೈಗೊಂಡಿರುತ್ತದೆ.

ಮೃತದೇಹವನ್ನು ವೈದ್ಯಾಧಿಕಾರಿಗಳಿಂದ ಪಿ.ಎಂ.ಇ. ಮಾಡಿಸಿ, ವೈದ್ಯರು ಸಂಗ್ರಹಿಸಿದ ವಸ್ತುಗಳನ್ನು ಎಫ್.ಎಸ್.ಎಲ್ ತಜ್ಞರ ಪರಿಶೀಲನೆಗೆ ಕಳುಹಿಸಿಕೊಟ್ಟಿರುತ್ತದೆ. ಈ ಪ್ರಕರಣದಲ್ಲಿ ಎಲ್ಲಾ ಆಯಾಮಗಳಿಂದ ತನಿಖೆಯನ್ನು ಕೈಗೊಳ್ಳುವ ತನಿಖಾಧಿಕಾರಿಗಳಿಗೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಲಾಗಿದ್ದು, ಸದರಿ ಸೂಚನೆಗಳ ಅನುಸಾರ ಲೋಕೋ ಪೈಲೇಟ್, ಗಾರ್ಡ್, ಅಸಿಸ್ಟೆಂಟ್ ಲೋಕೋ ಪೈಲೇಟ್, ಸ್ಟೇಷನ್ ಮಾಸ್ಟರ್, ಕೀಮ್ಯಾನ್, ಸದರಿ ರೈಲುಗಾಡಿಯ ಟಿ.ಟಿ.ಇ, ಎ.ಸಿ ಮ್ಯಾಕಾನಿಕ್, ಬೆಡ್ ರೋಲರ್ಸ್ ರವರ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ಹಿರೇಹಳ್ಳಿಯಿಂದ ದೊಡ್ಡಬೆಲೆ ವರೆಗೆ ಟ್ರಾಕ್ ಪೆಟ್ರೋಲಿಂಗ್ ಮಾಡಿ ಪರಿಶೀಲಿಸಿ, ಮಾಹಿತಿಯನ್ನು ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಸದರಿ ರೈಲುಗಾಡಿಯು ಚಲಿಸಿದ ರೈಲುಮಾರ್ಗದಲ್ಲಿ ಇರುವ ಸಿ.ಸಿ.ಟಿ.ವಿ ಕ್ಯಾಮಾರಗಳನ್ನು ಪರಿಶೀಲಿಸಲಾಗಿರುತ್ತದೆ, ಸದರಿ ಘಟನಾ ಸ್ಥಳ ಮತ್ತು ಮೃತಳ ವಸ್ತುಗಳ ದೊರೆತ ಸ್ಥಳದ ಟವರ್ ಡಂಪ್ ಮಾಹಿತಿ ಪಡೆದು, ಮೃತಳ ಸಿ.ಡಿ.ಆರ್ ಮಾಹಿತಿಯನ್ನು ಪರಿಶೀಲಿಸಲಾಗಿರುತ್ತದೆ. ಮೃತಳ ಮೊಬೈಲ್ ರಿಟ್ರಿವ್ ಮಾಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಮೃತಳ ಬ್ಯಾಂಕ್ ಸ್ಟೇಟ್‌ಮೆಂಟ್ ಪಡೆದು ಪರಿಶೀಲಿಸಲಾಗಿರುತ್ತದೆ. ಮೃತಳು ಕೆಲಸ ಮಾಡುತ್ತಿದ್ದ ಸಹದ್ಯೋಗಿಗಳ ಹೇಳಿಕೆಯನ್ನು ಸಹ ಪಡೆಯಲಾಗಿರುತ್ತದೆ. ಕೋಚ್ ಪೋಸಿಷನ್ ಮತ್ತು ಸದರಿ ರೈಲುಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದ ಪ್ರಯಾಣಿಕರ ಮಾಹಿತಿಯನ್ನು ನೀಡುವಂತೆ ರೈಲ್ವೇ ಅಧಿಕಾರಿಗಳಿಗೆ ಕೋರಲಾಗಿರುತ್ತದೆ.

ಇಂತಹ ಘಟನೆಗಳು ಮರುಕಳಿಸದಂತೆ, ತಡೆಗಟ್ಟುವ ನಿಟ್ಟಿನಲ್ಲಿ ರೈಲುಗಾಡಿಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿಗಳನ್ನು ಗಸ್ತು ಕರ್ತವ್ಯಕ್ಕೆ ನೇಮಕ ಮಾಡಲಾಗಿರುತ್ತದೆ. ಬೆಂಗಾವಲು ಮಾಡುವ ಸಿಬ್ಬಂದಿಗಳು ಮಹಿಳಾ ಪ್ರಯಾಣಿಕರ ಬೋಗಿಗಳಿಗೆ ಹೋಗಿ ಹೆಚ್ಚಿನ ಸಂಖ್ಯೆ ಇಲ್ಲದೇ ಇದ್ದಲ್ಲಿ ಅಂತಹವರನ್ನು ಸುರಕ್ಷತೆ ಹಿತದೃಷ್ಟಿಯಿಂದ ಇತರೆ ಬೋಗಿಗಳಿಗೆ ಸ್ಥಳಾಂತರ ಮಾಡಿಸಲಾಗುತ್ತಿದೆ. ಇಂತಹ ಘಟನೆಗಳನ್ನು ತಡೆಗಟ್ಟುವ ಸಲುವಾಗಿ ಆರ್.ಪಿ.ಎಫ್ ಅಧಿಕಾರಿ ಸಿಬ್ಬಂದಿಗಳನ್ನು ಗಸ್ತು ಕರ್ತವ್ಯಕ್ಕೆ ನೇಮಕ ಮಾಡುವಂತೆ ಆರ್.ಪಿ.ಎಫ್ ಅಧಿಕಾರಿಗಳನ್ನು ಹಾಗೂ ಮಹಿಳಾ ಬೋಗಿಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮಾರಗಳನ್ನು ಅಳವಡಿಸುವಂತೆ ರೈಲ್ವೇ ಅಧಿಕಾರಿಗಳನ್ನು ಕೋರಲಾಗಿರುತ್ತದೆ.

ಈ ಪ್ರಕರಣದ ಸೂಕ್ಷ್ಮತೆಯನ್ನು ಗಮನಿಸಿ, ಈ ಪ್ರಕರಣದ ನೈಜ ಸಂಗತಿಯನ್ನು ಪತ್ತೆಹಚ್ಚುವ ಸಲುವಾಗಿ ಅಧಿಕಾರಿ/ಸಿಬ್ಬಂದಿಗಳ ತಂಡವನ್ನು ಪ್ರತ್ಯೇಕವಾಗಿ ರಚಿಸಿದ್ದು, ಎಲ್ಲಾ ಆಯಾಮಗಳಂದ ಪರಿಣಾಮಕಾರಿಯಾಗಿ ತನಿಖೆಯನ್ನು ಕೈಗೊಂಡಿದ್ದು, ಪ್ರಸ್ತುತ ಪ್ರಕರಣವು ತನಿಖೆಯಲ್ಲಿರುತ್ತದೆ.

**HD/6/PCQ/2024**

(ಡಾ:ಜಿ.ಪರಮೇಶ್ವರ)
ಗೃಹ ಸಚಿವರು